(4) ಮಂತ್ರಿಗಳ ಹೇಳಿಕೆ.

ವಿಷಯ: ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಾಹನ ನಿಲುಗಡೆ ಮತ್ತು ಪಾರ್ಕಿಂಗ್ ಶುಲ್ಕ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :— ಮಾನ್ಯ ಅಧ್ಯಕ್ಷರೇ, ನಾಗರೀಕರ ಕೆಲವು ಬೇಡಿಕೆಗಳ ಮೇಲೆ ಹಿಂದೆ ನಿರ್ಧಾರ ಮಾಡಿರತಕ್ಕ ದರಗಳನ್ನು ಮಹಾನಗರಪಾಲಿಕೆಯವರು ಪುನರ್ ವಿಮರ್ಶಿಸಿ ತಾರೀಖು: 25-10-2006 ರಂದು ತೀರ್ಮಾನ ಮಾಡಿದ್ದಾರೆ. ಈ ಪುನರ್ ವಿಮರ್ಶಿತ ದರದ ಪ್ರಕಾರ 'ಎ' ವರ್ಗಕ್ಕೆ ಈ ಹಿಂದೆ ನಿಗದಿಪಡಿಸಿದ್ದು 2 ಗಂಟೆಯವರೆಗೆ 2 ರೂಪಾಯಿ ಇದ್ದರೆ ಈಗ ಪರಿಷ್ಕರಿಸಿರುವುದು1-50 ಫ್ಲೆಸ್ 2 ಗಂಟೆಗೆ ಮೀರಿ 4 ಗಂಟೆಯವರೆಗೆ ಹಿಂದೆ ಇದ್ದುದು.

ಶ್ರೀ ಆರ್. ಅಶೋಕ್ :— ಮಾನ್ಯ ಅಧ್ಯಕ್ಷರೇ, ನಾನು ಈ ವಿಷಯದ ಬಗ್ಗೆ ಇನ್ನೂ ಪ್ರಸ್ತಾಪವನ್ನೇ ಮಾಡಿಲ್ಲ. ಆಗಲೇ ಮಾನ್ಯ ಮಂತ್ರಿಯವರು ಉತ್ತರ ಹೇಳುತ್ತಿದ್ದಾರೆ.

ಅಧ್ಯಕ್ಷರು :— ನೀವು ಅದನ್ನು ಪ್ರಸ್ತಾಪ ಮಾಡದೇ ಇದ್ದರೆ, ನಿಮ್ಮ ವಿಷಯವನ್ನು ಇನ್ನೊಂದು ದಿನ ತೆಗೆದು ಕೊಳ್ಳೋಣ. ಇದು ಸಂಬಂಧಪಟ್ಟಿದ್ದಲ್ಲವೆಂದರೆ ಏಕೆ ತೆಗೆದುಕೊಳ್ಳಬೇಕು.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ನಿನ್ನೆ ಅವರು ಪ್ರಸ್ತಾಪ ಮಾಡಿದ್ದೇ ಬೇರೆ ವಿಷಯ. ಆದರೆ, ಅವರು ಉತ್ತರ ಹೇಳುತ್ತಿರುವುದೇ ಬೇರೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ಸಣ್ಣ ಜಿಜ್ಞಾಸೆ ಆಗುವುದೇನೆಂದರೆ, ನಾವು ಶೂನ್ಯವೇಳೆಯ ಪ್ರಸ್ತಾವಕ್ಕೆ ಬರೆದುಕೊಟ್ಟಿರುತ್ತೇವೆ. ಸುಮಾರು 5-6 ದಿವಸಗಳ ನಂತರ ತಾವು ನಮ್ಮನ್ನು ಪ್ರಸ್ತಾಪ ಮಾಡಲು ಕರೆಯುತ್ತೀರಿ.

1.30 ಪಿ.ಎಂ.

ನಾವು 4-5 ಶೂನ್ಯವೇಳೆಯ ವಿಷಯಗಳನ್ನು ಕೊಟ್ಟಿರುತ್ತೇನೆ. ಬೆಳಗಿನ ಸಮಯದಲ್ಲಿ ಯಾವಾಗ ಶೂನ್ಯವೇಳೆ ಬರುತ್ತದೆ, ಆದರಲ್ಲಿ ಯಾವ ಪ್ರಶ್ನೆ ಬರುತ್ತದೆ ಎಂಬ ಬಗ್ಗೆ ಸದಸ್ಯರಿಗೆ ತಿಳಿಸಿದರೆ ತುಂಬಾ ಅನುಕೂಲವಾಗುತ್ತದೆ.

ಅಧ್ಯಕ್ಷರು :— ಅದರ ಬಗ್ಗೆ ನಮ್ಮ ನೋಟೀಸ್ ಬೋರ್ಡ್‌ನಲ್ಲಿ ಹಾಕುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, 'ಎ' ವರ್ಗದಲ್ಲಿ ಐದು ರೂಪಾಯಿ ಇದ್ದದನ್ನು ನಾಲ್ಕು ರೂಪಾಯಿಗಳಿಗೆ ಇಳಿಸಿದೆ. 'ಬಿ' ವರ್ಗದಲ್ಲಿ ನಾಲ್ಕು ರೂಪಾಯಿ ಇದ್ದದನ್ನು ಮೂರು ರೂಪಾಯಿಗಳಿಗೆ ಇಳಿಸಿದೆ. ಆರು ಗಂಟೆಗೆ ಮೀರಿ 'ಎ' ವರ್ಗಕ್ಕೆ ಇದ್ದ 10 ರೂಪಾಯಿಗಳನ್ನು 8 ರೂಪಾಯಿಗಳಿಗೆ 'ಬಿ' ವರ್ಗದಲ್ಲಿ ಇದ್ದ 8

ರೂಪಾಯಿಗಳನ್ನು 7 ರೂಪಾಯಿಗಳಿಗೆ ಇಳಿಸಿದೆ. ಇದರ ಜೊತೆಗೆ ಸೀಜನ್ ಟಿಕೇಟ್ ತೆಗೆದುಕೊಳ್ಳುವವರಿಗೆ 20 ಪರ್‌ಸೆಂಟ್ ರಿಯಾಯಿತಿ ನೀಡಿದ್ದರೆ, ಪತ್ರಕರ್ತರಿಗೆ 50 ಪರ್‌ಸೆಂಟ್ ರಿಯಾಯಿತಿ ನೀಡಲಾಗಿದೆ. ಈ ಪುನರ್ವಿಮರ್ಶಿತ ದರದಿಂದ ಸಾರ್ವಜನಿಕರ ಕೆಲವು ಬೇಡಿಕೆಗಳಿಗೆ ಪರಿಹಾರವನ್ನು ನೀಡಿದಂತಾಗಿದೆ. ಈ ರೀತಿ ದರವನ್ನು ನಿಗದಿ ಮಾಡಿ ನಾವು ಜಾರಿಗೆ ಕೊಟ್ಟಿರುವುದರಿಂದ ಈ ಮೊದಲು ಅನಧಿಕೃತವಾಗಿ ಏನು ಹಣವನ್ನು ವಸೂಲಿ ಮಾಡುತ್ತಿದ್ದರು ಅದಕ್ಕೆ ಕಡಿವಾಣವನ್ನು ಹಾಕಿದಂತಾಗಿದೆ. ಈ ಪುನರ್ ವಿಮರ್ಶಿತ ದರ ನಾಗರೀಕರ ಹಿತದೃಷ್ಟಿಯಿಂದ ಇದು ನ್ಯಾಯಬದ್ಧವಾಗಿದೆ.

ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) :— ಮಾನ್ಯ ಅಧ್ಯಕ್ಷರೆ, ವಾಹನ ನಿಲುಗಡೆ ಶುಲ್ಕವೆಂದು ಬೆಂಗಳೂರು ವಾಸಿಗಳಿಗೆ ಕನ್ನಡ ರಾಜ್ಯೋತ್ಸವದ ಕೊಡುಗೆಯಾಗಿ ಮಹಾನಗರ ಪಾಲಿಕೆಯವರು ಕೊಟ್ಟಿದ್ದಾರೆ. ಇದು ಹಳೆಯ ಯೋಜನೆ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಹಿಂದೆ ಮೇಯರ್ ಆಗಿದ್ದಂಥ ಮಾನ್ಯ ಸುಧನ್ವರವರು, ಇದು ಒಳ್ಳೆಯದಲ್ಲ, ಇದರಿಂದ ನಾಗರೀಕರಿಗೆ ತೊಂದರೆಯಾಗುತ್ತದೆಂದು ಈ ಹಿಂದೆಯೇ ಬಂದಿದ್ದಂಥ ಈ ಪ್ರಸ್ತಾವನೆಯನ್ನು ವಾಪಸ್ ಕಳಿಸಿದ್ದಾರೆ. ಆದರೆ ಇಂದು ವಾಹನ ಶುಲ್ಕವನ್ನು ಜಾರಿಗೆ ತರುವುದರ ಮೂಲಕ ಬೆಂಗಳೂರು ಜನತೆಗೆ ಆದರಲ್ಲೂ ವಾಹನವನ್ನು ಇಟ್ಟು ಕೊಂಡಿರುವವರಿಗೆ ಕನ್ನಡ ರಾಜ್ಯೋತ್ಸವದ ಅಂಗವಾಗಿ ತೆರಿಗೆಯನ್ನು ಹಾಕಿದಂತಾಗಿದೆ. ಇವರೇನು ಅಕ್ರಮವಾಗಿ ವಾಹನ ಶುಲ್ಕವನ್ನು ವಸೂಲು ಮಾಡುತ್ತಿದ್ದರು ಎಂದು ಹೇಳಿದ್ದಾರೆ. ಅದು ತಪ್ಪು. ಎಲ್ಲೂ ಆ ರೀತಿ ಆಗುತ್ತಿರಲಿಲ್ಲ. ಯಾರೋ ಭಿಕ್ಷಕರು ಆ ರೀತಿ ಮಾಡಬಹುದಿತ್ತು. ಪೆಟ್ರೋಲ್ ಮೇಲೆ ಈಗಾಗಲೇ 25 ಪೈಸೆ ತೆರಿಗೆಯನ್ನು ಬೆಂಗಳೂರಿನಲ್ಲಿ ಹಾಕಲಾಗಿದೆ. ತಾವೇನು ಪಾರ್ಕಿಂಗ್ ಶುಲ್ಕವನ್ನು ವಸೂಲಿ ಮಾಡುತ್ತೀರಿ, ಇದಕ್ಕೆ ಯಾವುದೇ ಕಟ್ಟಡಗಳನ್ನು ಕಟ್ಟಿಲ್ಲ. ಜೆ.ಸಿ. ರಸ್ತೆಯಲ್ಲಿ ಕಟ್ಟಿರುವ ಕಟ್ಟಡ ಅರ್ಧಕ್ಕೆ ನಿಂತಿದೆ. ಅಲ್ಲಿ ಭಿಕ್ಷಕರು ವಾಸ ಮಾಡುತ್ತಿದ್ದಾರೆ. ಈಗಾಗಲೇ ಮೂವತ್ತು ಕಡೆಗಳಲ್ಲಿ ಸ್ಥಳಗಳನ್ನು ಗುರುತಿಸಲಾಗಿದ್ದು ಅಲ್ಲಿ ಒಂದು ಕಡೆಯೂ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಿಲ್ಲ. ಇದಕ್ಕಾಗಿ ಒಂದು ಪೈಸೆಯನ್ನೂ ಖರ್ಚು ಮಾಡಿಲ್ಲ. ತಾವು ಅದಕ್ಕೆ ಸುರಕ್ಷಾ ಎಂದು ಹೇಳಿದ್ದೀರಿ. ರಸ್ತೆಯ ಬದಿಯಲ್ಲಿ ನಿಲ್ಲಿಸುವ ವಾಹನಕ್ಕೆ ಯಾವ ರೀತಿಯ ರಕ್ಷಣೆ ಕೊಡುತ್ತೀರಿ? ಕಟ್ಟಡ ಕಟ್ಟುತ್ತೀರಾ? ಪೋಲೀಸ್ ಕಾವಲು ಹಾಕುತ್ತಿರಾ ಯಾವುದೂ ಇಲ್ಲ. ಹಾಗಿದ್ದ ಮೇಲೆ ಈ ರೀತಿ ಶುಲ್ಕವನ್ನು ಹಾಕಬಾರದು. ಮೊದಲು ಕಟ್ಟಡಗಳನ್ನು ಕಟ್ಟಿ ಆನಂತರ ಶುಲ್ಕವನ್ನು ವಸೂಲಿ ಮಾಡಬೇಕು. ಇದರಿಂದ ಮಹಾನಗರಪಾಲಿಕೆಗೆ ಒಳ್ಳೆಯ ಆದಾಯವೇನೂ ಇರುವುದಿಲ್ಲ. 62 ಲಕ್ಷ ರೂಪಾಯಿಗಳ ಆದಾಯ ಬರುವುದಾಗಿ ಅವರು ಹೇಳಿದ್ದಾರೆ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :— ಮಾನ್ಯ ಅಧ್ಯಕ್ಷರೆ, ನೋಟೀಸ್ ವಿಚಾರಗಳ ಬಗ್ಗೆ ಅವರು ಇಲ್ಲಿ ಪ್ರಸ್ತಾಪ ಮಾಡುವುದಾದರೆ ಅದರ ಬಗ್ಗೆ

ಲೆಕ್ಕಗಳನ್ನು ಕೊಡುವುದು ಹೇಗೆ? ಇವತ್ತು ಶೂನ್ಯ ವೇಳೆಯಲ್ಲಿ 31 ವಿಷಯಗಳನ್ನು ಇಟ್ಟಿದ್ದೀರಿ. ಅದರಲ್ಲಿ ಒಂದು ವಿಚಾರದ ಬಗ್ಗೆ ಚರ್ಚೆಯಾಗಲು ಅರ್ಧ ಗಂಟೆಯಾಯಿತು. ಶೂನ್ಯ ವೇಳೆಯಲ್ಲಿ ಜರೂರಾದ ವಿಚಾರಗಳ ಬಗ್ಗೆ ಮಾತ್ರ ಚರ್ಚೆ ಮಾಡುವ ಅಧಿಕಾರ ಅವರಿಗೆ ಇದೆ. ಇದು ನಡೆದುಕೊಂಡು ಬಂದಿರುವ ಪದ್ಧತಿ. ಆದರೆ ತಾವು 31 ವಿಷಯಗಳ ಬಗ್ಗೆ ಅವಕಾಶ ನೀಡಿ ಈ ರೀತಿ ಚರ್ಚೆ ಮಾಡಿಕೊಂಡು ಹೋದರೆ ಮೂರು ಗಂಟೆ ಇದಕ್ಕಾಗಿ ಬೇಕಾಗುತ್ತದೆ. ಮಾನ್ಯ ಸದಸ್ಯರು ವಿವರವಾಗಿ ಚರ್ಚೆ ಮಾಡುವುದಿದ್ದರೆ ಬೇರೆ ರೀತಿಯಲ್ಲಿ ತರಲಿ, ಆಗ ಸರ್ಕಾರವೂ ವಿವರವಾದ ಮಾಹಿತಿ ನೀಡುತ್ತದೆ.

ಶ್ರೀ ಆರ್. ಅಶೋಕ್ :— ಮಾನ್ಯ ಅಧ್ಯಕ್ಷರೆ, ವಾಹನ ಶುಲ್ಕವನ್ನು ಜಾರಿಗೆ ತಂದ ದಿವಸವೇ ನಾನು ಕಳಿಸಿಕೊಟ್ಟಿದ್ದೆ. ಆದರೆ ಅವತ್ತು ಅವಕಾಶ ದೊರೆಯಲಿಲ್ಲ. ಇಂದು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಾರೆ.

ಅಧ್ಯಕ್ಷರು :— ಮಾನ್ಯ ಸದಸ್ಯರುಗಳು ಸಹ ಶೂನ್ಯವೇಳೆಯಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಿ ಮುಗಿಸಬೇಕು.

ಶ್ರೀ ಆರ್. ಅಶೋಕ್ :— ಇದರಿಂದ ನಮಗೆ 62 ಲಕ್ಷ ರೂಪಾಯಿಗಳು ಮಾತ್ರ ಆದಾಯ ಬರುತ್ತದೆಂದು ಮಹಾನಗರಪಾಲಿಕೆಯವರು ಹೇಳಿದ್ದಾರೆ. ಆದಾಯ ಹೆಚ್ಚಾಗಿ ಬರದಿದ್ದರೆ ಬೆಂಗಳೂರು ಜನರ ಮೇಲೆ ಏಕೆ ಈ ಹೊರೆಯನ್ನು ಏರುತ್ತಿದ್ದೀರಿ? ದಯಮಾಡಿ ಇದನ್ನು ಜಾರಿಗೆತರಬಾರದು. ಇವತ್ತು ಬಹುಮಹಡಿ ಕಟ್ಟಡಗಳಲ್ಲಿ ಪಾರ್ಕಿಂಗ್ ವ್ಯವಸ್ಥೆಗಳೇನಿದೆ, ಅವೆಲ್ಲವನ್ನೂ ತೆರವು ಮಾಡಿಸಿದರೆ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುವ ಅಗತ್ಯವೇ ಇರುವುದಿಲ್ಲ. ಇದನ್ನು ಮೊದಲು ಮಾಡಿ ಅನಂತರ ತಾವು ಪಾರ್ಕಿಂಗ್ ಶುಲ್ಕವನ್ನು ಹಾಕಬೇಕಾಗಿ ವಿನಂತಿಸುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೆಂಗಳೂರಿನ 79 ಕಡೆಗಳಲ್ಲಿ ಪಾರ್ಕಿಂಗ್ ಶುಲ್ಕವನ್ನು ಹಾಕುವ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಒಂದು ಗಂಟೆಯ ಒಳಗೆ ಇದ್ದರೆ ಇಷ್ಟು, ಅದಕ್ಕೂ ಹೆಚ್ಚಾದರೆ ಶುಲ್ಕವೂ ಹೆಚ್ಚು ಎಂದು ಜಾರಿಗೆ ತಂದಿದ್ದಾರೆ. ಈಗಾಗಲೇ ಜನರ ಮೇಲೆ ಸಾಕಷ್ಟು ತೆರಿಗೆಯ ಹೊರೆ ಇದೆ. ವಿಧಾನಸೌಧದಲ್ಲಿ ಒಂದು ಕಡೆ ಪಾರ್ಕಿಂಗ್ ವ್ಯವಸ್ಥೆ ಇದೆ, ಬಹುಮಹಡಿಗಳ ಕಟ್ಟಡದಲ್ಲಿ ಒಂದು ಕಡೆ ಪಾರ್ಕಿಂಗ್ ವ್ಯವಸ್ಥೆ ಇದೆ. ವಿಧಾನ ಸೌಧಕ್ಕೆ ಬಂದಾಗ ಒಂದು ಸಲ, ಬಹುಮಹಡಿಗಳ ಕಟ್ಟಡಕ್ಕೆ ಹೋದಾಗ ಮತ್ತೊಂದು ಸಲ ಈ ರೀತಿ ಪಾರ್ಕಿಂಗ್ ಶುಲ್ಕವನ್ನು ಕೊಟ್ಟುಕೊಂಡೇ ಹೋಗಬೇಕಾಗುತ್ತದೆ. ಅವರೇನು 76 ಸ್ಥಳಗಳಲ್ಲಿ ಪಾರ್ಕಿಂಗ್ ಶುಲ್ಕದ ವ್ಯವಸ್ಥೆ ಮಾಡಿದ್ದಾರೆ ಅಲ್ಲಿ ಯಾವುದೇ ವಿಧವಾದ ಸೆಕ್ಯುರಿಟಿ ವಿಷಾಡುಗಳನ್ನು

ಮಾಡಿಲ್ಲ. ಯಾರೋ ಗುತ್ತಿಗೆ ತೆಗೆದುಕೊಳ್ಳುತ್ತಾರೆ ಅವರು ಇರುವುದೊಂದನ್ನು ಬಿಟ್ಟರೆ ಮತ್ತೆ ಯಾವುದೂ ಇಲ್ಲ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಇದನ್ನು ವಿರೋಧ ಮಾಡುವುದರಲ್ಲಿ ಅರ್ಥವಿಲ್ಲ. ಮಹಾನಗರಪಾಲಿಕೆಗೆ ಹಣ ಬರಬೇಕಾಗುತ್ತದೆ.

ಶ್ರೀ ಆರ್. ಅಶೋಕ್ :— ಇದನ್ನು ಮಾಡಬಾರದು. ಇದಕ್ಕೆ ನಮ್ಮದಂತೂ ವಿರೋಧವಿದೆ. ಗಂಟಿಗೆ ಇಂತಿಷ್ಟು ತೆರಿಗೆಯೆಂದು ಹಾಕಿದರೆ ಹೇಗೆ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಇದಕ್ಕೆ ಇಡೀ ಬೆಂಗಳೂರು ನಗರದಲ್ಲಿ ವಿರೋಧವಿದೆ.

ಶ್ರೀ ಆರ್. ಅಶೋಕ್ :— ಪಾರ್ಕಿಂಗ್ ಜಾಗದಲ್ಲೆಲ್ಲಾ ನಗರಪಾಲಿಕೆಯವರು ಲಂಚವನ್ನು ವಸೂಲಿ ಮಾಡುತ್ತಾರೆ.

(ಗೊಂದಲ)

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಆದ್ದರಿಂದ ತಾವೇನು ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳಿಗೆ ಪಾರ್ಕಿಂಗ್ ಶುಲ್ಕವನ್ನು ನಿಗಧಿ ಮಾಡಿದ್ದೀರಿ ಅದನ್ನು ಕೈಬಿಡಬೇಕು. ಜನರ ಮೇಲೆ ಇದು ಹೊರೆಯಾಗುತ್ತದೆ. ಇದಕ್ಕೆ ಜನರ ವಿರೋಧವಿದೆ. ಇದನ್ನು ದಯವಿಟ್ಟು ಮಾಡಬಾರದೆಂದು ವಿನಂತಿಸುತ್ತೇನೆ.

ಗೊಂದಲ

ಶ್ರೀ ಹಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :— ಮಾನ್ಯ ಅಧ್ಯಕ್ಷರೇ, ಇದು ಬೆಂಗಳೂರು ಮಹಾನಗರ ಪಾಲಿಕೆಯವರು ತೆಗೆದುಕೊಂಡಿರತಕ್ಕಂಥ ತೀರ್ಮಾನ. ಇದನ್ನು ಅವರು ಜಾರಿಗೆ ಕೊಟ್ಟಿದ್ದಾರೆ. ಇದಕ್ಕೆ ನಾಗರೀಕರಿಂದಲೂ ಕೂಡ ಸ್ವಾಗತ ಬಂದಿದೆ. ಆದ್ದರಿಂದ ಈಗ ಅದನ್ನು ಬದಲಾವಣೆ ಮಾಡುವ ಪರಿಸ್ಥಿತಿಯು ಉದ್ಭವವಾಗುವುದಿಲ್ಲ ಎಂದು ನಾನು ತಿಳಿಸಬಯಸುತ್ತೇನೆ.

5. **ಪ್ರಶಸ್ತಿ.**

ಅಧ್ಯಕ್ಷರು :— ಈಗ ಈ ವಿಚಾರವನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಈಗ ಒಂದು ಪ್ರಶಸ್ತಿ ಇದೆ. ವರನಟ ಡಾ: ರಾಜ್‌ಕುಮಾರ್‌ರವರು ವಿಧಾನ ಸೌಧದಲ್ಲಿನ ಕಾನ್‌ಫರೆನ್ಸ್ ಹಾಲ್‌ನಲ್ಲಿ ಪ್ರೆಸ್ ಕಾನ್‌ಫರೆನ್ಸ್‌ನ್ನು ಮುಗಿಸಿಕೊಂಡು ಈಗ ಬ್ಯಾಂಕ್ವೆಟ್ ಹಾಲ್‌ಗೆ ಬರುತ್ತಿದ್ದಾರೆ. ಸದನದ ಅನೇಕ ಮಾನ್ಯ ಸದಸ್ಯರುಗಳು ಅವರನ್ನು ಭೇಟಿ